# ಅಂಶ - 2 ಸಂಧಿ ಮತ್ತು ಸಮಾಸ

**ವಿಷಯ ಕ್ರಮ**


2.0 ಉದ್ದೇಶ
2.1 ಪೀಠಿಕೆ
2.2 ಸಂಧಿ
2.3 ಕನ್ನಡ ಸಂಧಿ
    2.3.1 ಸಂಸ್ಕೃತ ಸಂಧಿ
    2.3.2 ಕನ್ನಡ ವ್ಯಂಜನ ಸಂಧಿ

**ಅಭ್ಯಾಸ - 1**
2.4 ಸಂಸ್ಕೃತ ಸಂಧಿ
    2.4.1 ಸಂಸ್ಕೃತ ಸ್ವರ ಸಂಧಿ

**ಅಭ್ಯಾಸ - 2**
    2.4.2 ಸಂಸ್ಕೃತ ವ್ಯಂಜನ ಸಂಧಿ

**ಅಭ್ಯಾಸ - 3**
    2.5 ಸಮಾಸ

**ಅಭ್ಯಾಸ - 4**
    2.6 ಸಾರಾಂಶ

**ಅಭ್ಯಾಸಗಳಿಗೆ ಉತ್ತರಗಳು**


## 2.0 ಉದ್ದೇಶ

ಈ ಅಂಶವನ್ನು ಓದಿದ ಮೇಲೆ ನೀವು

- ಪದಗಳಲ್ಲಿ ನಡೆಯುವ ಸಂಧಿ ಮತ್ತು ಸಮಾಸಗಳನ್ನು ಗುರುತಿಸುತ್ತೀರಿ
- ಕನ್ನಡ ಸಂಧಿ ಮತ್ತು ಸಂಸ್ಕೃತ ಸಂಧಿಗಳ ವ್ಯತ್ಯಾಸಗಳನ್ನು ಅರಿಯುತ್ತೀರಿ
- ಕನ್ನಡ ಸಂಧಿ ಮತ್ತು ಸಂಸ್ಕೃತ ಸಂಧಿ ಕಾರ್ಯಗಳನ್ನು ಸಮಾಸಗಳಲ್ಲಿ ಗುರುತಿಸುತ್ತೀರಿ
- ಸಂಧಿಯಾದ ಪದಗಳನ್ನೂ ಸಮಸ್ತ ಪದಗಳನ್ನೂ ಬಿಡಿಸಿ ಬರೆಯಲು ಕಲಿಯುವಿರಿ. ಇದರಿಂದ ಪದಗಳನ್ನು ಅರ್ಥಮಾಡಿಕೊಳ್ಳುವುದು ನಿಮಗೆ ಸುಲಭವಾಗುವುದು.

## 2.1 ಪೀಠಿಕೆ

ಹಿಂದಿನ ಅಂಶದಲ್ಲಿ ನೀವು ಸ್ವರ ಮತ್ತು ವ್ಯಂಜನಗಳನ್ನು ಸಂಧ್ಯಕ್ಷರಗಳನ್ನು ನೋಡಿದ್ದೀರಿ. ಉಚ್ಚಾರಣೆ ಹಾಗೂ ಬರವಣಿಗೆಯ ಬಗೆಗೂ ಸಾಕಷ್ಟು ತಿಳಿದುಕೊಂಡಿದ್ದೀರಿ. ಈ ಅಂಶದಲ್ಲಿ ಸಂಧಿ ಮತ್ತು ಸಮಾಸಗಳ ಬಗ್ಗೆ ತಿಳಿಯುಕೊಳ್ಳುತ್ತೀರಿ. ಸಂಧಿಗಳಲ್ಲಿ ಕನ್ನಡ ಸಂಧಿಗಳು, ಸಂಸ್ಕೃತ ಸಂಧಿಗಳು ಎಂಬ ಪ್ರಭೇದವಿದೆ. ಕನ್ನಡ ಭಾಷೆಯಲ್ಲಿ ಅನೇಕ ಸಂಸ್ಕೃತ ಪದಗಳು ಸ್ವಾಭಾವಿಕವಾಗಿ ಸೇರಿಕೊಂಡದ್ದರಿಂದ ಆ ಪದಗಳಲ್ಲಿ ನಡೆಯುವ ಸಂಸ್ಕೃತ ಸಂಧಿಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗುತ್ತದೆ. ಆದರೆ ಇಲ್ಲಿ ಎಲ್ಲ ಸಂಸ್ಕೃತ ಸಂಧಿಗಳನ್ನೂ ಹೇಳಿಲ್ಲ. ಕನ್ನಡದಲ್ಲಿ ಸ್ವಾಭಾವಿಕವಾಗಿ ಬಂದವುಗಳನ್ನು ಮಾತ್ರ ಹೇಳಲಾಗಿದೆ. ಅದೇ ಪ್ರಕಾರ ಸಮಾಸಗಳ ಬಗೆಗೂ ಚರ್ಚಿಸಲಾಗಿದೆ. ಈ ವಿಚಾರಗಳನ್ನು ಈ ಅಂಶದಿಂದ ತಿಳಿದು ಕೊಳ್ಳುತ್ತೀರಿ.

## 2.2 ಸಂಧಿ

ಎರಡು ಪದಗಳನ್ನು ಎಡಬಿಡದೆ ಉಚ್ಚರಿಸಿದಾಗ ವರ್ಣಗಳಲ್ಲಿ ಕೆಲವು ಬದಲಾವಣೆಗಳು ಕಂಡುಬರುತ್ತವೆ. ಅಂದರೆ ಕೆಲವೊಮ್ಮೆ ಅಕ್ಷರಗಳು ಬಿಟ್ಟು ಹೋಗುತ್ತವೆ. ಕೆಲವೊಮ್ಮೆ ಇನ್ನೊಂದು ಅಕ್ಷರ ಬಂದು ಹೇರಿಕೊಳ್ಳುತ್ತದೆ ಮತ್ತೆ ಕೆಲವೊಮ್ಮೆ ಒಂದಕ್ಷರ ಹೋಗಿ ಇನ್ನೊಂದಕ್ಷರ ಬರುತ್ತದೆ. ಈ ರೀತಿಯ ಕಾರ್ಯಕ್ಕೆ ಸಂಧಿಕಾರ್ಯ ಅಥವಾ ಸಂಧಿ ಎನ್ನುತ್ತಾರೆ. ಸಂಧಿ ಕಾರ್ಯ ನಡೆಯುವ ಸ್ಥಳಗಳು ಎರಡು : ಒಂದು — ಪದದ ಮಧ್ಯದಲ್ಲಿ ಅಂದರೆ ಪ್ರಕೃತಿಗೂ ಪ್ರತ್ಯಯಕ್ಕೂ ನಡುವೆ ನಡೆಯುತ್ತದೆ. ಇಂಥ ಸಂಧಿಗೆ ಪದಮಧ್ಯಸಂಧಿ ಎನ್ನುತ್ತಾರೆ. ಇನ್ನೊಂದು ಎರಡು ಪದಗಳ ಮಧ್ಯ ನಡೆಯುತ್ತದೆ. ಇದನ್ನು ಪದಾಂತ ಸಂಧಿ ಎನ್ನುತ್ತಾರೆ.ಎರಡು ಪದಗಳ ಮಧ್ಯೆ ನಡೆಯುವ ಸಂಧಿಕಾರ್ಯವು ಮೊದಲನೆಯ ಪದದ ಕೊನೆಯಲ್ಲಿ ನಡೆಯಬಹುದು ಅಥವಾ ಎರಡನೆಯ ಪದದ ಆದಿಯಲ್ಲಿ ನಡೆಯಬಹುದು. ಮುಂದೆ ಈ ಮಾತು ಹೆಚ್ಚು ಸ್ಪಷ್ಟವಾಗುತ್ತದೆ.

ಕನ್ನಡದಲ್ಲಿ ಸಂಸ್ಕೃತ ಪದಗಳೂ ಕನ್ನಡ ಪದಗಳಂತೆಯೇ ಸ್ವಾಭಾವಿಕವಾಗಿ ಪ್ರಯೋಗವಾಗುತ್ತವೆ. ಆದುದರಿಂದ ಸಂಧಿಕಾರ್ಯ ಕನ್ನಡ ಪದ ಮತ್ತು ಕನ್ನಡ ಪದಗಳ ನಡುವೆ ನಡೆಯಬಹುದು ಅಥವಾ ಎರಡೂ ಸಂಸ್ಕೃತ ಪದಗಳ ನಡುವೆ ನಡೆಯಬಹುದು. ಹಾಗಾದರೆ ಸಂಸ್ಕೃತ ಪದಗಳನ್ನು ಗುರುತಿಸುವುದು ಹೇಗೆ? ಎಂಬ ಪ್ರಶ್ನೆ ಏಳುತ್ತದೆ. ಕೆಲವೊಂದು ಲಕ್ಷಣಗಳಿವೆ. ಉದಾಹರಣೆಗೆ ಮಹಾಪ್ರಾಣಗಳುಳ್ಳ ಶಬ್ದ, ಉರ್ದು, ಇಂಗ್ಲೀಷ್ ಮೊದಲಾದ ಭಾಷೆಗಳಿಂದ ಎರವಲು ಅಲ್ಲವಾದ ಶಬ್ದದಲ್ಲಿ ಮಹಾಪ್ರಾಣಗಳಿದ್ದರೆ ಅದು ಸಾಮಾನ್ಯವಾಗಿ ಸಂಸ್ಕೃತ ಪದವಾಗಿರುತ್ತದೆ. ಅಷ್ಟು, ಇಷ್ಟು, ಎಷ್ಟುಗಳನ್ನುಳಿದು ಎಲ್ಲಿ 'ಷ' ಕಾರವಿರುತ್ತದೋ ಅದು ಸಂಸ್ಕೃತ ಪದವಾಗಿರುತ್ತದೆ. ಮೂರು ಅಕ್ಷರಗಳ ಒಂದೇ ಶಬ್ದವಿದ್ದು ಅದರಲ್ಲಿಯ ಸ್ವರಗಳು, ಒಂದನೆಯದು ಹ್ರಸ್ವ, ಎರಡನೆಯದು ದೀರ್ಘ, ಮೂರನೆಯದು ಹ್ರಸ್ವ — ಹೀಗೆ ಇದ್ದರೆ ಅದು ಸಂಸ್ಕೃತ ಅಥವಾ ಬೇರೆ ಭಾಷೆಯಿಂದ ಎರವಲು ಪದವಾಗಿರುತ್ತದೆ. ಸಂಯುಕ್ತಾಕ್ಷರಗಳನ್ನುಳ್ಳ ಅನೇಕ ಪದಗಳು ಸಂಸ್ಕೃತವಾಗಿರುತ್ತವೆ. ಋ ವರ್ಣವನ್ನು ಒಳಗೊಂಡ ಪದವೂ ಸಂಸ್ಕೃತವಾಗಿರುತ್ತದೆ. ಈ ಲಕ್ಷಣಗಳಿಗೆ ಒಳಪಡದೆ ಇದ್ದ ಅನೇಕ ಸಂಸ್ಕೃತ ಪದಗಳಿವೆ. ಅವು ರೂಢಿಯಿಂದ ಗೊತ್ತಾಗುತ್ತವೆ.

ಸಂಸ್ಕೃತ ಕನ್ನಡ ಪದಗಳ ವಿಭಜನೆಯನ್ನು ಕೊಡುವ ಅಗತ್ಯವಿಲ್ಲಿ ಏಕೆ ಬಂದಿತೆಂದರೆ, ಒಂದೇ ವರ್ಣಗಳ ಸನ್ನಿವೇಶದಲ್ಲಿ ಎರಡೂ ಸಂಸ್ಕೃತ ಪದಗಳಾಗಿದ್ದಾಗ ನಡೆಯುವ ಸಂಧಿ ಕಾರ್ಯ ಎರಡರಲ್ಲೊಂದು ಅಥವಾ ಎರಡೂ ಕನ್ನಡ ಪದ ಆಗಿದ್ದಾಗ ನಡೆಯುವ ಸಂಧಿ ಕಾರ್ಯಕ್ಕಿಂತ ಭಿನ್ನವಾಗಿದೆ.
ಉದಾಹರಣೆಗೆ :

ಗುರು + ಉಪದೇಶ = ಗುರೂಪದೇಶ
ಗುರು + ಉಳಿದನು = ಗುರುವುಳಿದನು

ಈ ಎರಡೂ ಉದಾಹರಣೆಗಳಲ್ಲಿ ಮೊದಲ ಪದದ ಕೊನೆಗೆ 'ಉ' ಇದೆ. ಎರಡನೆಯ ಪದದ ಪ್ರಾರಂಭಕ್ಕೂ 'ಉ' ಇದೆ. ಆದರೆ ಒಂದನೆಯದರಲ್ಲಿ 'ಉ + ಉ' ಸೇರಿ ದೀರ್ಘ 'ಊ' ಆದರೆ ಎರಡನೆಯದರಲ್ಲಿ 'ಉ + ಉ' ಸೇರಿ 'ಉ ವು' ಆಗಿದೆ. ಏಕೆಂದರೆ ಒಂದನೆಯದರಲ್ಲಿ ಎರಡೂ ಪದಗಳು ಸಂಸ್ಕೃತ. ಆದರೆ ಎರಡನೆಯದರಲ್ಲಿ ಮೊದಲ ಪದ ಸಂಸ್ಕೃತ ಅದಕ್ಕೆ ಇದಿರಾದ ಪದ ಕನ್ನಡ.

ಹೀಗೆ ನೋಡಿದಾಗ, ಎರಡೂ ಪದಗಳು ಸಂಸ್ಕೃತವಿದ್ದಾಗ ಸಂಸ್ಕೃತ ಸಂಧಿ ನಿಯಮಗಳು ನಡೆಯುತ್ತದೆ. ಆದರೆ ಎರಡೂ ಪದಗಳು ಅಥವಾ ಎರಡರಲ್ಲೊಂದು ಪದ ಕನ್ನಡವಾಗಿದ್ದರೆ ಕನ್ನಡ ಸಂಧಿ ನಿಯಮಗಳು ನಡೆಯುತ್ತವೆ.

ಮೊದಲು ಕನ್ನಡ ಸಂಧಿ ನಿಯಮಗಳನ್ನು ನೋಡೋಣ.

## 2.3 ಕನ್ನಡ ಸಂಧಿ

ಕನ್ನಡ ಸಂಧಿ ನಿಯಮಗಳಲ್ಲಿ ಎರಡು ವಿಭಾಗಗಳು.
1. ಸ್ವರ ಸಂಧಿ 2. ವ್ಯಂಜನ ಸಂಧಿ

### 2.3.1 ಕನ್ನಡ ಸ್ವರ ಸಂಧಿ

ಕನ್ನಡ ಸ್ವರಸಂಧಿಗಳು ಲೋಪಸಂಧಿ ಮತ್ತು ಆಗಮಸಂಧಿ ಎಂದು ಎರಡು ವಿಧ.

ಲೋಪಸಂಧಿಯಲ್ಲಿ ಮೊದಲನೆಯದು ಪದದ ಕೊನೆಗೆ ಇರುವ ಸ್ವರವು ಲೋಪವಾಗುತ್ತದೆ. ಎರಡನೆ ಪದದ ಆದಿಯಲ್ಲಿರುವ ಸ್ವರವು ಬಂದು ಸೇರಿಕೊಳ್ಳುತ್ತದೆ. ಈ ರೀತಿ ನಡೆಯುವುದಕ್ಕೆ ಲೋಪಸಂಧಿ ಎನ್ನುತ್ತಾರೆ.

ಉದಾಹರಣೆಗೆ:

ಅತ್ತ + ಇತ್ತ = ಅತ್ತಿತ್ತ (ಅತ್ತದಲ್ಲಿಯ ಕೊನೆಯ 'ಅ' ಹೋಗಿ ಇತ್ತದ 'ಇ' ಬಂದು ಅದಕ್ಕೆ ಸೇರಿಕೊಂಡಿದೆ)
ಅಲ್ಲಿ + ಅಲ್ಲಿ = ಅಲ್ಲಲ್ಲಿ
ಸುಖವು + ಆಯಿತು = ಸುಖವಾಯಿತು
ಮನೆಯಲ್ಲಿ + ಇದ್ದನು = ಮನೆಯಲ್ಲಿದ್ದನು.

**ಗಮನವಿಡಿ**: ಅರ್ಥಕ್ಕೆ ಬಾಧೆ ಬರುವಂತಿದ್ದರೆ ಅದಲ್ಲಿ ಲೋಪಸಂಧಿ ಮಾಡಬಾರದು. ಉದಾಹರಣೆಗೆ ತಂದೆ + ಇಲ್ಲ ಎಂಬುದನ್ನು ತಂದಿಲ್ಲ ಎಂದೂ, ಮಡು + ಇದು ಎಂಬುದನ್ನು ಮಡಿದು ಎಂದೂ ಮಾಡಿದರೆ ಮೂಲ ಅರ್ಥಕ್ಕೆ ಬಾಧೆ ಬರುತ್ತದೆ. ಆದುದರಿಂದ ಇಲ್ಲಿ ತಂದೆಯಿಲ್ಲ, ಮಡುವಿದು ಎಂದು ಮಾಡಬೇಕು.

**ಆಗಮ ಸಂಧಿಯು** ಮೂರು ವಿಧ. ಯಕಾರಾಗಮ ವಕಾರಾಗಮ ಲಕಾರಾಗಮ ಎಂದು. ಯಕಾರಾಗಮದಲ್ಲಿ ಮೊದಲ ಪದ ಕೊನೆಗೆ ಇ, ಈ, ಎ, ಐ ಗಳಲ್ಲಿ ಯಾವುದಾದರೂ ಒಂದು ಸ್ವರವಿದ್ದು ಮುಂದೆ ಯಾವುದೇ ಸ್ವರ ಪರವಾದಾಗ ಅಥವಾ ಯಾವುದೇ ಸ್ವರದ ಮುಂದೆ ಇ, ಈ, ಎ, ಐ ಗಳು ಬಂದಾಗ ಯಕಾರವು ಸೇರಿಕೊಳ್ಳುತ್ತದೆ.
ಹೇಗೆಂದರೆ:

ನರಿ + ಇಂದ = ನರಿಯಿಂದ
ಮೀ + ಅಲಿಕ್ಕೆ = ಮೀಯಲಿಕ್ಕೆ
ಕಟ್ಟಿಗೆ + ಅನ್ನು = ಕಟ್ಟಿಗೆಯನ್ನು
ಕೈ + ಎತ್ತಿದ = ಕೈಯೆತ್ತಿದ
ಬೇ + ಇಸು = ಬೇಯಿಸು

ವಕಾರಾಗಮದಲ್ಲಿ ಮೊದಲ ಪದದ ಕೊನೆಗೆ ಅ, ಆ, ಉ, ಊ, ಋ, ಓ, ಔ ಗಳಲ್ಲಿ ಯಾವುದಾದರೂ ಒಂದು ಸ್ವರವಿದ್ದು ಮುಂದೆ ಬೇರೊಂದು ಸ್ವರ ಬಂದರೆ ವಕಾರಾಗಮವಾಗುತ್ತದೆ.
ಉದಾಹರಣೆಗೆ:

ಗುರು + ಅನ್ನು = ಗುರುವನ್ನು
ಹೂ + ಇಂದ = ಹೂವಿಂದ
ಮನ + ಇಲ್ಲಿ = ಮನವಿಲ್ಲಿ
ಪಿತೃ + ಉ = ಪಿತೃವು
ದನ + ಓಡಿತು = ದನವೋಡಿತು

ಲಕಾರಾಗಮದಲ್ಲಿ ಮೊದಲ ಪದದ ಕೊನೆಯ ಸ್ವರದ ಮುಂದೆ ಸ್ವರ ಬಂದಿರುತ್ತದೆ.

ಅದರಿಂದ + ಏ = ಅದರಿಂದಲೇ
ಬರುತ್ತ + ಊ = ಬರುತ್ತಲೂ
ಮಾಡುತ್ತ + ಏ = ಮಾಡುತ್ತಲೇ

**ಪ್ರಕೃತಿ ಭಾವ**: ಆಗ ಬೇಕಾದ ಸಂಧಿ ಕಾರ್ಯ ಆಗದೆ ಇದ್ದರೆ ಅದಕ್ಕೆ ಪ್ರಕೃತಿ ಭಾವ ಎನ್ನುತ್ತಾರೆ. ಹೊಸ, ಹೊರ, ಒಳ, ಶಬ್ದಗಳ ಮುಂದೆ ಸ್ವರದಿಂದ ಪ್ರಾರಂಭವಾಗುವ ಶಬ್ದ ಬಂದಾಗ ಲೋಪಸಂಧಿ ಆಗಬೇಕು. ಆದರೆ ಆಗವೇ ಹಾಗೇ ಉಳಿಯುತ್ತವೆ. ಹೇಗೆಂದರೆ

ಹೊಸ + ಅಂಗಿ = ಹೊಸಂಗಿ ಎಂದಾಗಲೇ 'ಹೊಸ ಅಂಗಿ' ಎಂದೇ ಉಳಿಯುತ್ತದೆ. ಅದರಂತೆ
ಹೊರ + ಊರು = ಹೊರ ಊರು
ಒಳ + ಅಂಗಳ = ಒಳ ಅಂಗಳ

ಅದೇ ಪ್ರಕಾರದ ಸಂಬೋಧನಾ ರೂಪದ ನಂತರ ಮತ್ತು ಉದ್ಗಾರ, ಆಶ್ಚರ್ಯ, ಆನಂದ ಮೊದಲಾದ ಭಾವಗಳನ್ನು ಸೂಚಿಸುವ ಅವ್ಯಯಗಳ ನಂತರ ಪ್ರಕೃತಿ ಭಾವವಾಗುತ್ತದೆ. ಹೇಗೆಂದರೆ:

ರಾಮನೇ ಓದುತ್ತಿರು,
ಓಹೋ ಎಷ್ಟು ಚೆಂದ!
ಅಲೆ, ಅವನು ಬಂದೇ ಬಿಟ್ಟನೇ?
ಆಹಾ, ಎಷ್ಟು ರುಚಿ?

## 2.3.2 ಕನ್ನಡ ವ್ಯಂಜನ ಸಂಧಿ

ಕನ್ನಡ ವ್ಯಂಜನ ಸಂಧಿಗಳು ಯಾವಾಗಲೂ ಆದೇಶವನ್ನು ಒಳಗೊಂಡಿರುತ್ತವೆ. ಆದೇಶವೆಂದರೆ ಒಂದು ವರ್ಣಕ್ಕೆ ಪ್ರತಿಯಾಗಿ ಬೇರೊಂದು ವರ್ಣ ಬರುವುದು. ಈ ಕ್ರಿಯೆ ಯಾವಾಗಲೂ ಎರಡನೆಯ ಪದದ ಆದಿಯಲ್ಲಿ ನಡೆಯುತ್ತದೆ. ಆದೇಶವು ಎರಡು ವಿಧ.

(1) ಎರಡನೆಯ ಪದದ ಆದಿಯಲ್ಲಿ ಕ, ತ, ಪ ಕಾರಗಳಿದ್ದರೆ — ಅವು ಮೂರನೆಯ ವರ್ಣ ಅಂದರೆ ಗ, ದ, ಬ ಗಳಾಗುತ್ತವೆ. ಈ ಸಂಧಿಕಾರ್ಯ ಸಾಮಾನ್ಯವಾಗಿ ಆ ಎರಡು ಪದಗಳು ಸಮಾಸವಾದಾಗ ನಡೆಯುತ್ತದೆ.
ಉದಾಹರಣೆಗೆ :

ಹಳ + ಕನ್ನಡ = ಹಳಗನ್ನಡ
ನಿಲ್ + ತಾಣ = ನಿಲ್ದಾಣ
ಸುಖ + ಪಡು = ಸುಖಬಡು

(2) ಎರಡನೆಯ ಪದದ ಆದಿಯಲ್ಲಿರುವ ಪ, ಬ, ಮ ಗಳಿಗೆ 'ವ' ಆದೇಶವಾಗುತ್ತದೆ ಇದೂ ಸಮಾಸದಲ್ಲಿಯೇ ಗೋಚರವಾಗುವ ಸಂಧಿ.
ಉದಾಹರಣೆಗೆ :

ಕೆನೆ + ಪಾಲು = ಕೆನೆವಾಲು
ತಲೆ + ಬಾಗು = ತಲೆವಾಗು
ನಲ್ + ಮಾತು = ನಲ್ವಾತು

## ಅಭ್ಯಾಸ - 1

(ಅ) ಕೆಳಗಿನ ಪದಗಳಲ್ಲಿಯ ಸಂಧಿಯನ್ನು ಬಿಡಿಸಿ, ಹೆಸರು ಹೇಳಿರಿ.

ಅದರಿಂದಲಾಗದು ......, ಅಲ್ಲಿದ್ದನು ....................., ಗುರುವು ......................
ನೋವಾಗದು ..........., ಉದ್ದಗಲ ......................, ಗುರಿಯಿಟ್ಟು ......................
ಬಾಯಲ್ಲಿ ................., ಆವೂರು ......................, ಅಡಿಯಿಡು ......................
ಕೈಯಿಂದಲೇ ............, ಮೈಯಾರಿಸು ..................., ಬಾಯಾರಿಕೆ ......................

(ಆ) ಕೆಳಗಿನ ಪದಗಳನ್ನು ಸಂದಿ ಮಾಡಿ ಬರೆಯಿರಿ.

ಕೈ ಆಸರೆ ..............., ಮಾಡುತ್ತ + ಊ ............, ಬರೆ + ಇತು ......................
ಮನ + ಆರೆ ..........., ನದಿ + ಅಲ್ಲಿ .................., ಮನೆ + ಏ ......................
ಮುಂದೆ + ಆದನು ...., ಮರಿ + ಒಳಗೆ ................, ಬರೆದು + ಇಡು ..................
ಮನಸ್ಸು + ಅನ್ನು ....., ಹಸು + ಅನ್ನು .............., ಆದುದರಿಂದ + ಏ ................

(ಇ) ಕೆಳಗಿನ ಸಂಧಿ ಪದಗಳನ್ನು ಶಿಷ್ಟ ಕನ್ನಡ ರೂಪಗಳಲ್ಲಿ ಬರೆಯಿರಿ.

ಅದುವನ್ನು ............., ಮದುವೆದಲ್ಲಿ ..................., ಹೊಲದಾಗಲಿ ......................
ಮರದನ್ನು .............., ಅದರವಂತೆ ...................., ಎಂದಿನದಂತೆ ......................

(ಈ) ಕೆಳಗಿನ ಪದಗಳನ್ನು ಸಂಧಿ ಮಾಡಿ ಬರೆಯಿರಿ.

ಮರ + ಕಾಲು = ......................, ಮರ + ತುದಿ = .......................... ,
ಆನಂದ + ಪಟ್ಟನು ......................ಮಳೆ + ಕಾಲ = .......................... ,
ಹೇಣ + ತ್ರಿನಿ = ........................, ಖೇದ + ಪಡು = ..........................
ನೊರೆ + ಪಾಲು = ....................., ತಲೆ + ತೂಗು = .......................... ,
ತಲೆ + ಬಾಗಿಲು = .....................ನೆಲ + ಮನೆ = .......................... ,
ತೆರ + ಬಾಯಿ = ........................, ಮೇಲ್ + ಪಾಸು = ..........................
ಕೆನೆ + ಪಾಲು = ........................, ಕೊಡ + ಪಾಲು = .......................... ,

## 2.4 ಸಂಸ್ಕೃತ ಸಂಧಿ

ಸಂಸ್ಕೃತದಲ್ಲಿ ನಡೆಯುವ ಎಲ್ಲ ಸಂಧಿಗಳನ್ನೂ ಇಲ್ಲಿ ಚರ್ಚಿಸುವುದಿಲ್ಲ. ಆದರೆ ಕನ್ನಡದಲ್ಲಿ ಬಂದ ಸಂಸ್ಕೃತ ಪದಗಳಲ್ಲಿ ನಡೆಯುವ ಸಂಧಿಗಳನ್ನು ತಿಳಿದುಕೊಳ್ಳುವುದು ಅಗತ್ಯವಾಗುವುದರಿಂದ ಅವನ್ನು ಇಲ್ಲಿ ಚರ್ಚಿಸಲಾಗುತ್ತದೆ.

ಸಂಸ್ಕೃತ ಸಂಧಿ ಕಾರ್ಯ ನಡೆಯಬೇಕಾದರೆ ಎರಡೂ ಪದಗಳು ಸಂಸ್ಕೃತವಿರಲೇ ಬೇಕು. ಸಂಸ್ಕೃತ ಸಂಧಿಗಳನ್ನು ಎರಡು ಗುಂಪಾಗಿ ವಿಂಗಡಿಸಬಹುದು. ಒಂದು ಸ್ವರ ಸಂಧಿ, ಇನ್ನೊಂದು ವ್ಯಂಜನ ಸಂಧಿ.

## 2.4.1 ಸಂಸ್ಕೃತ ಸ್ವರ ಸಂಧಿ

ಸಂಸ್ಕೃತ ಸ್ವರ ಸಂಧಿಗಳಲ್ಲಿ ನಾಲ್ಕು ಪ್ರಕಾರಗಳು

(1) **ಸವರ್ಣದೀರ್ಘ ಸಂಧಿ**: ಅ ಆ, ಇ, ಈ, ಉ ಊ, ಋ ೠ ಹೀಗೆ ನಾಲ್ಕು ಸವರ್ಣಸ್ವರಗಳ ಗುಂಪು. ಈ ಸವರ್ಣಸ್ವರಗಳಲ್ಲಿ ಒಂದಕ್ಕೊಂದು ಇದಿರಾದಾಗ ಪರಿಣಾಮ ದೀರ್ಘ ಸ್ವರವೇ ಆಗಿರುತ್ತದೆ. ಉದಾಹರಣೆಗೆ

ರಾಜ್ಯ + ಅಭಿಷೇಕ = ರಾಜ್ಯಾಭಿಷೇಕ
ಸಚಿವ + ಆಲಯ = ಸಚಿವಾಲಯ
ವಿದ್ಯಾ + ಅಭ್ಯಾಸ = ವಿದ್ಯಾಭ್ಯಾಸ
ವಿದ್ಯಾ + ಆಲಯ = ವಿದ್ಯಾಲಯ

ಇದೇ ರೀತಿ ಉಳಿದ ಸವರ್ಣಸ್ವರಗಳನ್ನೂ ತಿಳಿಯಬೇಕು. ಕೆಲವನ್ನಿಲ್ಲಿ ನೋಡೋಣ.

ಮುನಿ + ಇಂದ್ರ = ಮುನೀಂದ್ರ
ಗೌರೀ + ಈಶ = ಗೌರೀಶ
ಗುರು + ಉಪದೇಶ = ಗುರೂಪದೇಶ
ಪಿತೃ + ಋಣ = ಪಿತೄಣ

(2) **ಯಣ್ ಸಂಧಿ**: ಇ ಈ, ಉ ಊ, ಋ ಗಳ ಮುಂದೆ ಸವರ್ಣವಲ್ಲದ ಸ್ವರ ಬಂದಾಗ, ಇ ಈ ಗಳಿಗೆ ಯಕಾರವೂ, ಉ ಊ ಗಳಿಗೆ ವ ಕಾರವೂ, ಋ ಕಾರಕ್ಕೆ ರ್ ವೂ ಆದೇಶವಾಗುತ್ತದೆ.
ಹೇಗೆಂದರೆ:

ಅತಿ + ಉತ್ತಮ = ಅತ್ಯುತ್ತಮ
ನದೀ + ಉದಕ = ನದ್ಯುದಕ
ಗುರು + ಆಜ್ಞೆ = ಗುರ್ವಾಜ್ಞೆ
ಪಿತೃ + ಆಜ್ಞೆ = ಪಿತ್ರಾಜ್ಞೆ

(3) **ಗುಣ ಸಂಧಿ**: ಅ, ಆ ಗಳ ಮುಂದೆ ಇ ಅಥವಾ ಈ ಬಂದರೆ 'ಏ' ಆಗುವುದು: ಉ ಅಥವಾ ಊ ಬಂದರೆ ಓ ಆಗುವುದು, ಋ ಬಂದರೆ 'ಅರ್' ಆಗುವುದು ಗುಣಸಂಧಿಯೆನಿಸಿಕೊಳ್ಳುತ್ತದೆ. ಈ ರೀತಿಯ ಆದೇಶವು ಎರಡೂ ಸ್ವರಗಳ ಬದಲು ಬರುತ್ತದೆ. ಹೇಗೆಂದರೆ:

ನರ + ಇಂದ್ರ = ನರೇಂದ್ರ
ಮಹಾ + ಈಶ್ವರ = ಮಹೇಶ್ವರ
ಶೀತ + ಉಪಚಾರ = ಶೀತೋಪಚಾರ
ಮಹಾ + ಋಷಿ = ಮಹರ್ಷಿ

(4) **ವೃದ್ಧಿ ಸಂಧಿ**: ಅ, ಆ ಗಳ ಮುಂದೆ ಏ, ಐ ಗಳು ಬಂದರೆ ಐ ಎಂದೂ; ಓ, ಔ ಗಳು ಬಂದರೆ ಔ ಎಂದೂ ಆ ಎರಡೂ ಸ್ವರಗಳ ಸ್ಥಳದಲ್ಲಿ ಆದೇಶವಾಗುವುದು. ಈ ಸಂಧಿಯೂ ವೃದ್ಧಿ ಸಂಧಿ.

ಉದಾಹರಣೆಗೆ:

ಅತುಲ + ಐಶ್ವರ್ಯ = ಅತುಲೈಶ್ವರ್ಯ
ಏಕ + ಏಕ = ಏಕೈಕ
ವನ + ಔಷಧಿ = ವನೌಷಧಿ
ಘನ + ಔದಾರ್ಯ = ಘನೌದಾರ್ಯ

## ಅಭ್ಯಾಸ - 2

(ಅ) ಕೆಳಗಿನ ಪದಗಳನ್ನು ಸಂಧಿ ಮಾಡಿ ಬರೆಯಿರಿ.

ಕಂಠ + ಆಭರಣ = ........................ ಜನ + ಅಪೇಕ್ಷೆ ........................
ನಂದಿ + ಈಶ್ವರ = ........................ ನದೀ + ಈಶ = ........................
ಉಪ + ಆಹಾರ = ........................ ಲಘು + ಉಪಾಹಾರ = ........................
ವಧೂ + ಉನ್ನತಿ = ........................ ಮಾತೃ + ಋಣ = ........................

(ಆ) ಕೆಳಗಿನ ಪದಗಳನ್ನು ಸಂಧಿ ಮಾಡಿ ಬರೆಯಿರಿ.

ಪರಿ + ಆಪ್ತ = ........................ ಗುರು + ಆದಿ = ........................
ತನು + ಈಕ್ಷಣ = ........................ ದಧಿ + ಅನ್ನ = ........................
ಅತಿ + ಆಶೆ = ........................ ಕರ್ತೃ + ಅರ್ಥ = ........................
ಮಧು + ಇತಿ = ........................ ಮಾತೃ + ಇಚ್ಛಾ = ........................

(ಇ) ಕೆಳಗಿನ ಸಂಧಿಗಳನ್ನು ಬಿಡಿಸಿ ಬರೆಯಿರಿ.
ಮಹೇಂದ್ರ, ಉಷ್ಣೋದಕ, ಬ್ರಹ್ಮರ್ಷಿ, ಧೀರೋದಾತ್ತ, ರಾಜೇಂದ್ರ, ವೃಕೋದರ, ಮಹೋದಧಿ, ಲಂಬೋದರ.

.................................................................................................................................

.................................................................................................................................

(ಈ) ಕೆಳಗಿನ ಸಂಧಿ ಪದಗಳನ್ನು ಬಿಡಿಸಿ ಬರೆಯಿರಿ.
ಮಹೈಶ್ವರ್ಯ, ಮಹೌದಾರ್ಯ,
ಸಿದ್ಧೌಷಧಿ, ಲೋಕೈಕವೀರ.

## 2.4.2 ಸಂಸ್ಕೃತ ವ್ಯಂಜನ ಸಂಧಿ

ಕೆಳಗೆ ವಿವರಿಸಿದ ಸಂಸ್ಕೃತ ವ್ಯಂಜನ ಸಂಧಿಗಳು ವ್ಯಾಕರಣದ ತಿಳುವಳಿಕೆಗಾಗಿ ಅಗತ್ಯವೆನಿಸಿದೆ. ಈ ರೀತಿ ಸಂಧಿಯಾದ ಪದಗಳನ್ನೇ ಕನ್ನಡದಲ್ಲಿ ಬಳಸುವುದರಿಂದ ಯಾವ ಯಾವ ಪದಗಳು ಅಲ್ಲಿ ಒಳಗೊಂಡಿವೆ ಎಂಬುದನ್ನು ತಿಳಿದಿರಬೇಕು ಎಂಬ ಉದ್ದೇಶದಿಂದ ಇವನ್ನಿಲ್ಲಿ ವಿವರಿಸಲಾಗಿದೆ.

ಸಂಸ್ಕೃತ ವ್ಯಂಜನ ಸಂಧಿಗಳಲ್ಲಿ ಕನ್ನಡದ ದೃಷ್ಟಿಯಿಂದ ಮುಖ್ಯವಾದವುಗಳು ನಾಲ್ಕು ಮಾತ್ರ.

(1) ವರ್ಗಗಳ ಮೊದಲನೆಯ ವರ್ಣಗಳ ಮುಂದೆ ಸ್ವರ ಇಲ್ಲವೆ ಮೃದುವರ್ಣಗಳು ಬಂದಾಗ ಅವುಗಳ ಮೂರನೆಯ ವರ್ಣ ಆದೇಶವಾಗುತ್ತದೆ. ಅದೇ ಕರ್ಕಶವರ್ಣ ಬಂದಾಗ ಏನೂ ಬದಲಾವಣೆ ಆಗುವುದಿಲ್ಲ. ಉದಾಹರಣೆಗೆ :

ಸ್ವರ ಅಥವಾ ಮೃದುವರ್ಣ ಬಂದಾಗ:—
ವಾಕ್ + ಇಂದ್ರಿಯ = ವಾಗಿಂದ್ರಿಯ
ವಾಕ್ + ದೇವಿ = ವಾಗ್ದೇವಿ
ಸತ್ + ಉಪದೇಶ = ಸದುಪದೇಶ
ಷಟ್ + ಭಾಗ = ಷಡ್ಭಾಗ
ದಿಕ್ + ಗಜ = ದಿಗ್ಗಜ

ಕರ್ಕಶವರ್ಣ ಬಂದಾಗ:—
ದಿಕ್ + ಪಾಲ = ದಿಕ್ಪಾಲ
ಷಟ್ + ಕೋನ = ಷಟ್ಕೋನ
ಸತ್ + ಪಾತ್ರ = ಸತ್ಪಾತ್ರ

(2) ಸಕಾರ ತ ವರ್ಗಗಳಿಗೆ ಮುಂದೆ ಶ ಕಾರ ಚ ವರ್ಗಗಳು ಬಂದಾಗ ಶ ಕಾರ ಚ ವರ್ಗಗಳೂ; ಷ ಕಾರ, ಟ ವರ್ಗಗಳೂ ಬಂದಾಗ ಷ ಕಾರ ಟ ವರ್ಗಗಳೂ ಆಗುತ್ತವೆ. ಉದಾಹರಣೆಗೆ:

ತಪಸ್ + ಶಾಂತಿ = ತಪಶ್ಶಾಂತಿ
ಯಶಸ್ + ಚಂದ್ರಿಕೆ = ಯಶಶ್ಚಂದ್ರಿಕೆ
ಲಸತ್ + ಚಾಮರ = ಲಸಚ್ಚಾಮರ
ತಪಸ್ + ಷಡ್ಭಾಗ = ತಪಷ್ಷಡ್ಭಾಗ
ಧನುಸ್ + ಟಂಕಾರ = ಧನುಷ್ಟಂಕಾರ
ಉದ್ + ಡಯನ = ಉಡ್ಡಯನ

(3) ವರ್ಗದ ಮೊದಲನೇ ಅಕ್ಷರಗಳ ಮುಂದೆ ಅನುನಾಸಿಕಗಳು ಬಂದರೆ ಆಯಾ ವರ್ಗದ ಅನುನಾಸಿಕಗಳ ಆದೇಶವಾಗುತ್ತದೆ.

ದಿಕ್ + ಮೂಢ = ದಿಙ್ಮೂಢ
ಷಟ್ + ಮಾಸ = ಷಣ್ಮಾಸ
ತತ್ + ನರೇಂದ್ರ = ತನ್ನರೇಂದ್ರ

(4) ವಿಸರ್ಗದ ಹಿಂದೆ ಅ ಕಾರವಿದ್ದು ಮುಂದೆ ಅ ಅಥವಾ ಮೃದುವರ್ಣ ಬಂದರೆ ವಿಸರ್ಗಕ್ಕೆ ತತ್ವಶ: ಉ ಆದೇಶವಾಗುತ್ತದೆ. ಮುಂದೆ ಅ + ಉ ಸೇರಿ ಗುಣಸಂಧಿ ಪ್ರಕಾರ ಓ ಆಗಿ ಮುಂದಿನ ಅ ಲೋಪವಾಗುತ್ತದೆ.

ಮನಃ + ಅಭಿಲಾಷೆ = ಮನ + ಉ + ಅಭಿಲಾಷೆ = ಮನೋಭಿಲಾಷೆ
ಮನಃ + ರಥ = ಮನ + ಉ + ರಥ = ಮನೋರಥ

ಈ ಅಭ್ಯಾಸವು ಹಿಂದಿನ ಎಲ್ಲ ವಿವರಣೆಗಳನ್ನೂ ಆಧರಿಸಿದೆ.

(ಅ) ಕೆಳಗಿನವುಗಳು ಸಂಸ್ಕೃತ ಸಂಧಿಯೋ ಕನ್ನಡ ಸಂಧಿಯೋ ಗುರುತಿಸಿರಿ. ಅದರಂತೆ ( ✓ ) ಗುರುತು ಹಾಕಿ.

| | | | |
|---|---|---|---|
| ಲೋಕಾಕಾರ | (ಸಂ, ಕ), | ಆನಂದವಾಯಿತು | (ಸಂ, ಕ) |
| ಎಲ್ಲೆಲ್ಲಿಯೂ | (ಸಂ, ಕ), | ನೊರೆವಾಲು | (ಸಂ, ಕ) |
| ಕುರಿಗಾಲು | (ಸಂ, ಕ), | ನಿಶ್ಶಕ್ತಿ | (ಸಂ, ಕ) |

(ಆ) ಕೆಳಗಿನ ಸಂಧಿಗಳ ಹೆಸರುಗಳನ್ನು ( ✓ ) ಈ ಗುರುತಿನಿಂದ ಗುರುತಿಸಿರಿ.

| | |
|---|---|
| ಸೀತಾಕ್ಷಿ | (ಸವರ್ಣದೀರ್ಘ, ಯಣ್, ವೃದ್ಧಿ) |
| ವಿದ್ಯಾರ್ಥಿ | (ಲೋಪ, ಆಗಮ, ಸವರ್ಣದೀರ್ಘ) |
| ರಾಜೋತ್ಸವ | (ಆಗಮ, ಆದೇಶ, ಗುಣ) |
| ಗುರಿಯಿಲ್ಲದೆ | (ಆಗಮ, ಆದೇಶ, ಲೋಪ) |

(ಇ) ಕೆಳಗಿನ ವಾಕ್ಯಗಳನ್ನು ಸರಿಪಡಿಸಿರಿ.

| | |
|---|---|
| ರಾಜ್ಯಾಂಗ | ಇದು ಸವರ್ಣದೀರ್ಘ ಸಂಧಿ ...... |
| ರಾಜರ್ಷಿ | ಇದು ವೃದ್ಧಿ ಸಂಧಿ ............................ |
| ಮಹೋದಧಿ | ಇದು ವೃದ್ಧಿ ಸಂಧಿ ................................ |
| ತಿಳಿಗನ್ನಡ | ಇದು ಆಗಮ ಸಂಧಿ ................................ |

## 2.5 ಸಮಾಸ

ಸಂಧಿಗೂ ಸಮಾಸಕ್ಕೂ ಒಂದು ರೀತಿಯ ಸಂಬಂಧವಿದೆ. ಅಂದರೆ ಎರಡರಲ್ಲೂ ಪದಗಳ ಎಡಬಿಡದ ಉಚ್ಚಾರವಿರುತ್ತದೆ. ಕೆಲವು ಸಮಾಸಗಳಲ್ಲಿ ಸಂಧಿ ಕಾರ್ಯ ನಡೆಯುತ್ತದೆ. ಇನ್ನು ಕೆಲವಲ್ಲಿ ಸಂಧಿ ಕಾರ್ಯದ ಸನ್ನಿವೇಶವಿರುವುದಿಲ್ಲ. ಸಮಾಸದಲ್ಲಿ ಎರಡು ಅಥವಾ ಹಲವು ಪದಗಳು ಸೇರಿ ಒಂದು ಅರ್ಥವನ್ನು ಕೊಡುತ್ತವೆ. ಉದಾಹರಣೆಗೆ 'ಅರಸನ' ಎಂಬ ಪದ ಮತ್ತು 'ಮನೆ' ಎಂಬ ಪದ ಸೇರಿ 'ಅರಮನೆ' ಎಂಬ ಸಮಾಸ ಪದವಾಗುತ್ತದೆ. ಇಲ್ಲಿ ಅರಸನ ಎಂಬ ಪದ 'ಅರ' ಆದುದನ್ನು ಗಮನಿಸಬೇಕು. ಅರಮನೆ ಎಂಬ ಸಮಸ್ತ ಪದ (ಸಮಾಸವಾದ ಪದ) ವನ್ನು ಅರಸನ ಮನೆ ಎಂದು ಬಿಡಿಸಿ ಹೇಳುವುದಕ್ಕೆ ವಿಗ್ರಹವೆನ್ನುತ್ತಾರೆ. ವಿಗ್ರಹದಲ್ಲಿಯ ಮೊದಲಿನ ಪದಕ್ಕೆ ಪೂರ್ವಪದ ಎಂದೂ ಎರಡನೆಯದಕ್ಕೆ ಉತ್ತರಪದವೆಂದೂ ಸಂಕೇತಿಸುವ ರೂಢಿಯಿದೆ.

ಸಮಾಸಗಳಲ್ಲಿ ಐದು ಪ್ರಕಾರಗಳು. (1) ತತ್ಪುರುಷ (2) ಕರ್ಮಧಾರಯ (3) ಬಹುವ್ರೀಹಿ (4) ದ್ವಂದ್ವ (5) ಹೀಗೆ ಐದು ಪ್ರಕಾರದ ಸಮಾಸಗಳು ಕನ್ನಡದಲ್ಲಿ ಪ್ರಚುರವಾಗಿವೆ.

(1) **ತತ್ಪುರುಷ** : ಈ ಸಮಾಸದಲ್ಲಿ ಉತ್ತರ ಪದದ ಅರ್ಥಕ್ಕೆ ಪ್ರಾಧಾನ್ಯವಿರುತ್ತದೆ.

ಉದಾಹರಣೆಗೆ :

ಮೈಯಿಂದ ಕಲಿ, ಮೈಗಲಿ,
ಕೈಯ ಬೆರಳು, ಕೈಬೆರಳು,
ಹೊಟ್ಟೆಯಲ್ಲಿ ಕಿಚ್ಚು, ಹೊಟ್ಟೆಕಿಚ್ಚು,
ಸುಖವನ್ನು ಪಡು, ಸುಖಪಡು,
ಕಾಲನ್ನು ಇಡು, ಕಾಲಿಡು

ಮೈಗಲಿ ಎಂಬ ಪದದಿಂದ 'ಅವನು ವೀರ, ಕಲಿ' ಎಂದು ಹೇಳುವುದು ಮುಖ್ಯವಾಗಿರುತ್ತದೆ. ಆದುದರಿಂದ ಈ ಸಮಾಸದಲ್ಲಿ ಉತ್ತರ ಪದದ ಅರ್ಥಕ್ಕೆ ಪ್ರಾಧಾನ್ಯವಿರುತ್ತದೆ. ಎಂಬುದನ್ನು ಗಮನಿಸಬೇಕು. ಸುಖವನ್ನು ಪಡು ಮೊದಲಾದವುಗಳಲ್ಲಿ ಸಮಸ್ತ ಪದ ಕ್ರಿಯೆಯಾದುದರಿಂದ ಇದನ್ನು ಕ್ರಿಯಾ ಸಮಾಸವೆಂದು ಕೆಲವರು ಹೇಳುತ್ತಾರೆ.

(2) ಕರ್ಮಧಾರಯ : ವಿಶೇಷಣ (ವರ್ಣಿಸುವ ಪದ) ಮತ್ತು ವಿಶೇಷ್ಯಗಳು (ವರ್ಣಿಸಿಕೊಳ್ಳುವ ಪದ) ಸೇರಿ ಆಗುವ ಸಮಾನ ಕರ್ಮಧಾರಯ ಸಮಾಸ. ವರ್ಣಿಸುವ ಪದ ಗುಣ, ಸಂಖ್ಯೆ ಪರಿಮಾಣ, ಕ್ರಿಯೆಗಳನ್ನು ಹೇಳುತ್ತಿರುತ್ತದೆ.

ಉದಾಹರಣೆಗೆ :

ಕರಿಯ ಬಟ್ಟೆ, ಕರಿ ಬಟ್ಟೆ, ಒಳ್ಳೆಯದು ಮಾತು, ಒಳ್ಳೆಯ ಮಾತು, ಬೀಸುವ ಕಂಸಾಳೆ, ಬೀಸುಕಂಸಾಳೆ ಹಾಡುವ ತುಂಬಿ, ಮೇಘದಂತೆ ಶ್ಯಾಮನು, ಮೇಘಶ್ಯಾಮನು, ಹಸಿಯದೂ ಬಿಸಿಯದೂ, ಹಸಿಬಿಸಿದು ಮೂರು ಲೋಕಗಳು, ಮೂಲೋಕಗಳು, ಹಿರಿಯ ಗುರುಗಳು, ಹಿರಿಗುರುಗಳು.

ಸಂಖ್ಯೆಯು ಪೂರ್ವಪದವಾಗುಳ್ಳ ಕರ್ಮಧಾರೆಯ ಸಮಾಸವನ್ನು **ದ್ವಿಗು ಸಮಾಸ** ಎಂದು ಕೆಲವರು ಹೇಳುತ್ತಾರೆ ಪೂರ್ವ ಪದ ಸಂಖ್ಯೆಯಷ್ಟೇ ಅಲ್ಲದೆ ದ್ವಿಗು ಸಮಾಸದಲ್ಲಿ "ಒಟ್ಟು" ಎಂಬರ್ಥ ಅಂದರೆ **ಸಮಾಹಾರವು,** ತೋರುತ್ತಿರುತ್ತದೆ. ಮೂರು ಲೋಕಗಳು ಎಂದಷ್ಟೇ ಹೇಳುವುದಾದರೆ ಕರ್ಮಧಾರಯ. ಆದರೆ ಮೂರು ಲೋಕಗಳ ಒಟ್ಟು 'ಮೂಲೋಕವೂ' ಎಂದಾಗ ದ್ವಿಗುಸಮಾಸವಾಗುತ್ತದೆ. ಈ ಸೂಕ್ಷ್ಮದ ನಿರ್ಣಯ ಕಷ್ಟವಾದಾಗ ಕೇವಲ ಕರ್ಮಧಾರಯ ಎಂದು ಗುರುತಿಸಿದರೂ ಸಾಕಾಗುತ್ತದೆ.

ಅದೇ ಪ್ರಕಾರ ಕೃದಂತ ವಿಶೇಷಣವೂ ಪೂರ್ವಪದವಾಗುಳ್ಳ ಸಮಾಸವನ್ನು **ಗಮಕ ಸಮಾಸವೆನ್ನುತ್ತಾರೆ.** ಇದರಲ್ಲಿ ಉತ್ತರ ಪದ ಸಾಮಾನ್ಯವಾಗಿ ಸಂಸ್ಕೃತವಿರುತ್ತದೆ. ಬೀಸುವ ಚಾಮರ, ಹೊಳೆವ ಸೂರ್ಯ ಆ ಪುಸ್ತಕ ಮೊದಲಾದವನ್ನು ಗಮಕಸಮಾಸಕ್ಕೆ ಉದಾಹರಿಸುತ್ತಾರೆ. ದ್ವಿಗು ಮತ್ತು ಗಮಕ ಸಮಾಸಗಳು ಕರ್ಮಧಾರಯ ಅಂಗವಾಗಿಯೇ ಬರುತ್ತವೆ ಎಂಬುದನ್ನು ಗಮನಿಸಿದರೆ ಸಾಕು.

(3) **ಬಹುವ್ರೀಹಿ :** ಈ ಸಮಾಸದಲ್ಲಿ ಎರಡೂ ಪದಗಳ ಅರ್ಥವಲ್ಲದೆ ಮತ್ತೊಂದು ಅರ್ಥದ ಪ್ರಾಧಾನ್ಯ ತೋರಿ ಬರುತ್ತದೆ. ಉದಾಹರಣೆಗೆ ಮೂರು ಕಣ್ಣು ಉಳ್ಳವ ಮುಕ್ಕಣ್ಣ. ಇಲ್ಲಿ ಮೂರು, ಕಣ್ಣು ಎಂಬ ವಿಗ್ರಹದಲ್ಲಿ ಎರಡು ಪದದಲ್ಲಿಯೂ ಅರ್ಥದ ಪ್ರಾಧಾನ್ಯವಿಲ್ಲ. ಆದರೆ ಮತ್ತೊಂದು ಅರ್ಥದ ಪ್ರಾಧಾನ್ಯ ಅಂದರೆ ಶಿವ ಎಂಬ ಅರ್ಥದ ಪಾದಾನ್ಯ ತೋರುತ್ತದೆ. ಇಂಥ ಸಮಾಸಗಳಿಗೆ ಬಹುವ್ರೀಹಿ ಸಮಾಸವೆನ್ನುತ್ತಾರೆ.

ಕಮಲವು ಆಸನ ಯಾವನಿಗೋ ಅವನು ಕಮಲಾಸನ.
ಚಕ್ರವು ಪಾಣಿಯಲ್ಲಿ (ಕೈಯಲ್ಲಿ) ಯಾವನಿಗೋ ಅವನು ಚಕ್ರಪಾಣಿ.
ಹಣೆಯಲ್ಲಿ ಕಣ್ಣು ಉಳ್ಳವನು ಹಣೆಗಣ್ಣ.
ಉಬ್ಬಿದ ಹಲ್ಲು ಉಳ್ಳವನು ಉಬ್ಬಲ್ಲ.
ಏಳೋ ಎಂಟೋ ಏಳೆಂಟು. (ಇಲ್ಲಿ ಏಳು ಮತ್ತು ಎಂಟು ಇವುಗಳು ಒಟ್ಟು (ಸಮಾಹಾರ) ತೋರುವುದಿಲ್ಲ ಎಂಬುದನ್ನು ಗಮನಿಸಿರಿ).

(4) **ದ್ವಂದ್ವ:** ಎರಡು ಅಥವಾ ಹೆಚ್ಚು ಪ್ರಮಾಣದ ವಿಭಕ್ತಿಯಲ್ಲಿರುವ ಪದಗಳು ಸೇರಿ ಆಗುವ ಸಮಾಸವು ದ್ವಂದ್ವ ಸಮಾಸವು ಇಲ್ಲಿ ಎಲ್ಲ ಪದಗಳ ಅರ್ಥಕ್ಕೆ ಸಮಾನ ಪ್ರಾಧಾನ್ಯವಿರುತ್ತದೆ.
ಉದಾಹರಣೆಗೆ :

ಎಲೆಯೂ ಅಡಕೆಯೂ ಎಲೆಯಡಕೆಗಳು.
ಗಿಡವೂ ಬಳ್ಳಿಯೂ ಗಿಡಬಳ್ಳಿಗಳು.
ರಾಮನೂ ಕೃಷ್ಣನೂ ಗೋವಿಂದನೂ ರಾಮಕೃಷ್ಣಗೋವಿಂದರು.

ಸಮಸ್ತಪದದ ಕೊನೆಗೆ ಬರುವ ಬಹುವಚನ ಪ್ರತ್ಯಯವನ್ನು ಗಮನಿಸಿರಿ. ಹಲವೆಡೆ ಈ ಬಹುವಚನ ಪ್ರತ್ಯಯವನ್ನು ಲೋಪ ಮಾಡುವ ರೂಢಿ ಇದೆ. ಇಂತಹ ಸಮಾಸಗಳನ್ನು ದ್ವಂದ್ವ ಸಮಾಸವೆಂದು ಕರೆಯುವುದಿದೆ.

(5) **ಅಂಶಿ: ಅಂಶವಾಚಕವೂ ಅಂಶವನ್ನು ಒಳಗೊಂಡ ಶಬ್ದವೂ ಸೇರಿ ಆಗುವ ಸಮಾಸವು ಅಂಶಿ ಸಮಾಸ ಎನಿಸಿಕೊಳುಳತ್ತದೆ.**
ಉದಾಹರಣೆಗೆ :

| | |
|---|---|
| **ಕಾಲಿನ ಅಡಿ** | **ಅಂಗಾಲು.** |
| **ಮರದ ತುದಿ** | **ತುದಿ ಮರ.** |
| **ಕೈಯ ಮುಂದು** | **ಮುಂಗೈ** |
| **ಹೊಟ್ಟೆಯ ಕೆಳಗು** | **ಕಿಬ್ಬೊಟ್ಟೆ** |

ಗಮನಿಸಿ : 'ಮರದ ತುದಿ — ತುದಿ ಮರ' ಇದು ಅಂಶಿ ಸಮಾಸ. ಆದರೆ ಅದೇ 'ಮರದ ತುದಿ — ಮರದುದಿ' ಎಂದಾದರೆ ತತ್ಪುರುಷವಾಗುತ್ತದೆ. ಅಂಶಿ ಸಮಾಸದಲ್ಲಿ ಸಮಸ್ತ ಪದವು ಅಂಶದಿಂದ ಪ್ರಾರಂಭವಾಗುತ್ತದೆ. ಆದರೆ ತತ್ಪುರುಷದಲ್ಲಿ ಹಾಗಲ್ಲ. ವಿಗ್ರಹದ ಕ್ರಮವೇ ಉಳಿಯುತ್ತದೆ.

## ಅಭ್ಯಾಸ - 4

(ಅ) ಕೆಳಗಿನ ಪದಗಳನ್ನು ಸಮಾಸ ಮಾಡಿ ಹೆಸರು ಹೇಳಿರಿ.

1) ಕಾಡಿನ ಹಂದಿ ..................... , .................................... ಸಮಾಸ.
2) ಹಳೆಯ ಕನ್ನಡ ..................... , .................................... ಸಮಾಸ.
3) ಮರದ ಕಾಲು ..................... , .................................... ಸಮಾಸ.
4) ಕಣ್ಣಿನಲ್ಲಿ ಉರಿ ..................... , .................................... ಸಮಾಸ.
5) ಹುರಿದ ಕಡಲೆ ..................... , .................................... ಸಮಾಸ.
6) ಸಿಡಿಯುವ ಮದ್ದು ..................... , .................................... ಸಮಾಸ.
7) ಬೆಟ್ಟದ ತಾವರೆ ..................... , .................................... ಸಮಾಸ.
8) ಕಿರಿಯ ನಗೆ ..................... , .................................... ಸಮಾಸ.
9) ಹರಿವ ನದಿ ..................... , .................................... ಸಮಾಸ.
10) ಎರಡು ಹಕ್ಕಿ ..................... , .................................... ಸಮಾಸ.

(ಆ) ಕೆಳಗಿನ ಸಮಾಸಗಳನ್ನು ಬಿಡಿಸಿ ಬರೆದು ಹೆಸರು ಹೇಳಿರಿ.

ಕಾಲು ಬಳೆ ..................... , .................................... ಸಮಾಸ.
ಉರಿ ಬಿಸಿಲು ..................... , .................................... ಸಮಾಸ.
ಹಲ್ಲು ನೋವು ..................... , .................................... ಸಮಾಸ.
ಹಗಲುಗನಸು ..................... , .................................... ಸಮಾಸ.
ಹುಡಿಮಣ್ಣು ..................... , .................................... ಸಮಾಸ.
ಕರಿಕಲ್ಲು ..................... , .................................... ಸಮಾಸ.
ಅರಮಗ ..................... , .................................... ಸಮಾಸ.
ಆನಂದಪಡು ..................... , .................................... ಸಮಾಸ.
ನಾಲ್ವೇದ ..................... , .................................... ಸಮಾಸ.
ಆ ಪುಸ್ತಕ ..................... , .................................... ಸಮಾಸ.

(ಇ) ಕೆಳಗಿನ ಸಮಸ್ತ ಪದಗಳಿಗೆ ವಿಗ್ರಹವನ್ನು ಬರೆದು ಹೆಸರು ಹೇಳಿರಿ.

ಪೀತಾಂಬರ ..................... , .................................... ಸಮಾಸ.
ಅಂಗೈ ..................... , .................................... ಸಮಾಸ.
ಒರೆಗಣ್ಣು ..................... , .................................... ಸಮಾಸ.
ಹಿಂಗಾರು ..................... , .................................... ಸಮಾಸ.
ಹೂಕಾಯಿ ..................... , .................................... ಸಮಾಸ.
ಕುರುಡುಗಣ್ಣು ..................... , .................................... ಸಮಾಸ.
ಗಜಾಶ್ವರಥಗಳು ..................... , .................................... ಸಮಾಸ.
ನಿಡುಮೂಗ ..................... , .................................... ಸಮಾಸ.
ಮುಂಗಾಲು ..................... , .................................... ಸಮಾಸ.
ಪೆರೆದಲೆಯ (ಪೆರೆ=ಚಂದ್ರ)..................... , .................................... ಸಮಾಸ

**ಗಮನಿಸಿ: ಮುಂಗಾಲು ಎಂಬ ಸಮಸ್ತ ಪದದ ವಿಗ್ರಹ ಎರಡು ವಿಧದಲ್ಲಿ ಸಾಧ್ಯವಿದೆ. 'ಕಾಲಿನ ಮುಂದು' ಎಂದೂ 'ಮುಂದಿನ ಕಾಲು' ಎಂದೂ ಎರಡು ವಿಧದಲ್ಲಿಯೂ ಅರ್ಥಪೂರ್ಣವಾಗಿ ವಿಗ್ರಹ ಮಾಡಬಹುದು. "ಆಳ ಹಿಂಗಾಲು ಮುರಿದಿದೆ" ಎಂಬಲ್ಲಿ ಹಿಂದಿನ ಕಾಲು ಎ ಂದೇ ಅರ್ಥ. ಆದರೆ "ಅವಳ ಹಿಂಗಾಲು ನೋಯುತ್ತಿದೆ" ಎಂಬಲ್ಲಿ ಕಾಲಿನ ಹಿಂಬಾಗ ಎಂದೇ ಅರ್ಥ. ಮೊದಲನೆಯದು ಕರ್ಮಧಾರಯವಾದರೆ ಎರಡನೆಯದು ಅಂಶಿ. ಹೀಗೆ ಸಂದರ್ಭವೂ ಸಮಾಸ ವಿಗ್ರಹದಲ್ಲಿ ಸಹಾಯ ಮಾಡುತ್ತದೆ. ವಿಗ್ರಹವನ್ನು ಅನುಸರಿಸಿ ಸಮಾಸ ಲಕ್ಷಣವಿರುತ್ತದೆ.**

(ಈ) ಕೆಳಗಿನ ಪದಗಳನ್ನು ಸಮಾಸ ಮಾಡಿ ಬರೆಯಿರಿ

ಬದಿಯ ಕೆಳಗು ..........................................................................
ಎರಡು ಹಲ್ಲುಗಳನ್ನು ಉಳ್ಳದು ಯಾವುದೋ ಅದು ..................................................
ಕೆಳಗಿನ ತುಟಿ ..........................................................................
ಮೂರು ಕಣ್ಣು ಉಳ್ಳವನು ..................................................................
ಶೇಷನು ಶಯನ ಆಗಿರುವುದು ಯಾರಿಗೋ ಅವನು ................................................
ಕಸವೂ ಕಡ್ಡಿಯೂ ......................................................................
ಕಮಲದಂತೆ ನಯನ ಉಳ್ಳವಳು ಯಾವಳೋ ಅವಳು ...............................................
ಗುಡುಗೂ ಮಿಂಚೂ ಸಿಡಿಲೂ ...............................................................
ಕೈ ಮತ್ತು ಕಾಲು ......................................................................

**ಸೂಚನೆ :** ಬಹುವ್ರೀಹಿ ಸಮಾಸದ ಕೊನೆಗೆ - ಅ ಪ್ರತ್ಯಯ ಸೇರುವುದನ್ನು ಗಮನಿಸಬೇಕು. 'ನಿಡಿದಾದ ಮೂಗು ನಿಡು ಮೂಗು'. ಇದು ಕರ್ಮಧಾರಯ ಸಮಾಸ. ಆದರೆ, ಕೊನೆಗೆ - ಅ ಪ್ರತ್ಯಯ ಸೇರುವುದರಿಂದ 'ಉಳ್ಳವನು' ಎಂಬ ಅರ್ಥ ಸೇರಿಕೊಂಡು ಬಹುವ್ರೀಹಿ ಸಮಾಸವಾಗುತ್ತದೆ. 'ನಿಡಿದಾದ ಮೂಗು ಉಳ್ಳವನು - ನಿಡು ಮೂಗ' ಹೀಗೆಯೇ ಪೆರೆದಲೆಯ, ಸ್ತ್ರೀ ಇದ್ದಾಗ ಸಾಮಾನ್ಯವಾಗಿ - ಇ ಪ್ರತ್ಯಯ ಸೇರುತ್ತದೆ.)

## 2.6 ಸಾರಾಂಶ

ಸಂಧಿ ಮತ್ತು ಸಮಾಸಗಳು ಎಂಬ ಈ ಅಂಶದಲ್ಲಿ ಕನ್ನಡ ಮತ್ತು ಸಂಸ್ಕೃತ ಪದಗಳಲ್ಲಿ ನಡೆಯುವ ಸಂಧಿ ಕಾರ್ಯಗಳನ್ನು ನೋಡಿದಿರಿ. ಒಂದೇ ರೀತಿಯ ಸನ್ನಿವೇಶಗಳು ಇದ್ದರೂ ಕನ್ನಡ ಪದಗಳಲ್ಲಿ ನಡೆಯುವ ಸಂಧಿ ಒಂದು ರೀತಿಯಾದರೆ ಸಂಸ್ಕೃತ ಪದಗಳಲ್ಲಿ ನಡೆಯುವ ಸಂಧಿ ಇನ್ನೊಂದು ರೀತಿಯಾಗುತ್ತದೆ. ಕನ್ನಡ ಸಂಧಿಗಳಲ್ಲಿ ಲೋಪ, ಆಗಮ, ಆದೇಶ ಸಂಧಿಗಳು ಮಹತ್ವದವು. ಅದೇ ರೀತಿ ಸಂಸ್ಕೃತ ಸಂಧಿಗಳಲ್ಲಿ ಸವರ್ಣದೀರ್ಘ, ಯಣ್, ಗುಣ, ವೃದ್ಧಿ ಸಂಧಿಗಳೂ ಕೆಲವು ವ್ಯಂಜನ ಸಂಧಿಗಳೂ ಮಹತ್ವದವು.

ಸಮಾಸದಲ್ಲಿ ತತ್ಪುರುಷ, ಕರ್ಮಧಾರಯ, ಬಹುವ್ರೀಹಿ, ದ್ವಂದ್ವ, ದ್ವಿಗು, ಅಂಶಿ ಸಮಾಸಗಳು ಮಹತ್ವದವು. ಈ ಸಮಾಸಗಳಲ್ಲಿ ಅಂಶಿ ಸಮಾಸವು ಕನ್ನಡದ ವಿಶಿಷ್ಟ ಸಮಾಸ. ಇದು ಸಂಸ್ಕೃತದಲ್ಲಿಲ್ಲ. ಉಳಿದ ಐದು ಸಮಾಸಗಳು ಕನ್ನಡ ಪದಗಳಲ್ಲೂ ಸಂಸ್ಕೃತ ಪದಗಳಲ್ಲೂ ನಡೆಯುತ್ತವೆ.

ಈ ಅಂಶದಿಂದ, ಬರವಣಿಗೆಯನ್ನು ಸಂಧಿಸಮಾಸಗಳಿಂದ ಪ್ರೌಢವಾಗಿಸಬಹುದೆಂಬುದನ್ನು ಮನಗಾಣುವಿರಿ.

### ಅಭ್ಯಾಸಗಳಿಗೆ ಉತ್ತರಗಳು

**ಅಭ್ಯಾಸ - 1**

(ಅ)

| | | | |
|---|---|---|---|
| ಆದರಿಂದ + ಆಗದು, | ಲಕಾರಾಗಮ | ಅಲ್ಲಿ + ಇದ್ದನು | ಲೋಪ |
| ಗುರು + ಉ, | ವಕಾರಾಗಮ | ನೋವು + ಆಗದು | ಲೋಪ |
| ಉದ್ದ + ಅಗಲ, | ಲೋಪ | ಗುರಿ + ಇಟ್ಟು | ಯಕಾರಾಗಮ |
| ಬಾಯಿ + ಅಲ್ಲಿ | ಲೋಪ | ಆ + ಊರು | ವಕಾರಾಗಮ |
| ಅಡಿ + ಇಡು | ಯಕಾರಾಗಮ | ಕೈಯಿಂದ + ಐ | ಲಕಾರಾಗಮ |
| ಮೈ +ಆರಿಸಿ | ಯಕಾರಾಗಮ | ಬಾಯಿ + ಆರಿಕೆ | ಲೋಪ |

(ಆ)

| | | |
|---|---|---|
| ಕೈಯಾಸರೆ | ಮಾಡುತ್ತಲೂ | ಬರೆಯಿತು |
| ಮನವಾರೆ | ನದಿಯಲ್ಲಿ | ಮನೆಯೇ |
| ಮುಂದಾದನು | ಮರಿಯೊಳಗೆ | ಬರೆದಿಡು |
| ಮನಸ್ಸನ್ನು | ಹಸುವನ್ನು | ಆದುದರಿಂದಲೇ |

(ಇ)

| | | |
|---|---|---|
| ಅದನ್ನು | ಮದುವೆಯಲ್ಲಿ | ಹೊಲವಾಗಲಿ |
| ಮರವನ್ನು | ಅದರಂತೆ | ಎಂದಿನಂತೆ |

(ಈ)

| | |
|---|---|
| ಮರಗಾಲು | ಮರದುದಿ |
| ಆನಂದಪಟ್ಟನು | ಮಳೆಗಾಲ |
| ಹೆಣದಿನಿ | ಖೇದಬಡು |
| ನೊರೆವಾಲು | ತಲೆದೂಗು |
| ತಲೆವಾಗಿಲು | ನೆಲವನೆ |
| ತೆರವಾಯಿ | ಮೇಲ್ವಾಸು |
| ಕೆನೆವಾಲು | ಕೊಡವಾಲು |

**ಅಭ್ಯಾಸ - 2**

(ಅ)

| | |
|---|---|
| ಕಂಠಾಭರಣ | ಜನಾಪೇಕ್ಷೆ |
| ನಂದೀಶ್ವರ | ನದೀಶ |
| ಉಪಾಹಾರ | ಲಘೂಪಹಾರ |
| ವಧೂನ್ನತಿ | ಮಾತೃಣ |

(ಉ) ಪರ್ಯಾಪ್ತ  ಗುರ್ವಾದಿ
ತನ್ವೀಕ್ಷಣಾ  ದಧ್ಯನ್ನ
ಅತ್ಯಾಶೆ  ಕರ್ತ್ರರ್ಥ
ಮಧ್ವಿತಿ  ಮಾತ್ರಿಚ್ಛಾ

(ಊ) ಮಹಾ + ಇಂದ್ರ  ಉಷ್ಣ + ಉದಕ  ಬ್ರಹ್ಮ + ಋಷಿ  ಧೀರ + ಉದಾತ್ತ
ರಾಜ + ಇಂದ್ರ  ವೃಕ + ಉದರ  ಮಹಾ + ಉದಧಿ  ಲಂಬ + ಉದರ

(ಋ) ಮಹಾ + ಐಶ್ವರ್ಯ  ಮಹಾ + ಔದಾರ್ಯ  ಸಿದ್ಧ + ಔಷಧಿ  ಲೋಕ + ಏಕವೀರ

**ಅಭ್ಯಾಸ - 3**

(ಅ) ಲೋಕ + ಆಕಾರ (ಸಂ)  ಆನಂದ + ಆಯಿತು (ಕ)
ಎಲ್ಲಿ + ಎಲ್ಲಿಯೂ (ಕ)  ನೊರೆ + ಪಾಲು (ಕ)
ಮರ + ಕಾಲು (ಕ)  ನಿ + ಶಕ್ತಿ (ಸಂ)

(ಆ) ಯಣ್‌ಸಂಧಿ
ಸವರ್ಣದೀರ್ಘ
ಗುಣ
ಆಗಮ

(ಇ) ರಾಜ್ಯಾಂಗ
ಗುಣಸಂಧಿ
ಗುಣಸಂಧಿ
ಆದೇಶ ಸಂಧಿ

**ಅಭ್ಯಾಸ - 4**

(ಅ)
(1) ಕಾಡುಹಂದಿ  ಕರ್ಮಧಾರಯ
(2) ಹಳಗನ್ನಡ  ಕರ್ಮಧಾರಯ
(3) ಮರಗಾಲು  ಕರ್ಮಧಾರಯ
(4) ಕಣ್ಣುರಿ  ತತ್ಪುರುಷ
(5) ಹುರಿಗಡಲೆ  ಕರ್ಮಧಾರಯ
(6) ಸಿಡಿಮದ್ದು  ಕರ್ಮಧಾರಯ
(7) ಬೆಟ್ಟದಾವರೆ  ಕರ್ಮಧಾರಯ
(8) ಕಿರುನಗೆ  ಕರ್ಮಧಾರಯ
(9) ಹರಿವನದಿ  ಗಮಕ
(10) ಎರಡು ಹಕ್ಕಿ  ದ್ವಿಗು

(ಆ) ಕಾಲಿನ + ಬಳೆ  ತತ್ಪುರುಷ
ಉರಿಯುವ + ಬಿಸಿಲು  ಕರ್ಮಧಾರಯ
ಹಲ್ಲಿನಲ್ಲಿ + ನೋವು  ತತ್ಪುರುಷ
ಹಗಲಿನಲ್ಲಿ + ಕನಸು  ತತ್ಪುರುಷ
ಹುಡಿಯಾದ + ಮಣ್ಣು  ಕರ್ಮಧಾರಯ
ಕರಿಯ + ಕಲ್ಲು  ಕರ್ಮಧಾರಯ
ಅರಸನ + ಮಗ  ತತ್ಪುರುಷ
ಆನಂದವನ್ನು + ಪಡು  ಕ್ರಿಯಾ
ನಾಲ್ಕು + ವೇದ  ದ್ವಿಗು
ಆ + ಪುಸ್ತಕ  ಗಮಕ

(ಇ) ಪೀತವಾದ + ಅಂಬರ  ಕರ್ಮಧಾರಯ
ಕೈಯ + ಅಡಿ  ಅಂಶಿ
ಒರೆಯಾದ ಕಣ್ಣುಳ್ಳವನು  ಬಹುವ್ರೀಹಿ
ಕಾರುವಿನ + ಹಿಂದು  ಅಂಶಿ
ಹೂವು ಮತ್ತು ಕಾಯಿ  ದ್ವಂದ್ವ
ಕುರುಡಾದ ಕಣ್ಣುಳ್ಳವನು  ಬಹುವ್ರೀಹಿ
ಗಜ ಮತ್ತು ಅಶ್ವ ಮತ್ತು ರಥ  ದ್ವಂದ್ವ
ನಿಡಿದಾದ ಮೂಗುಳ್ಳವನು  ಬಹುವ್ರೀಹಿ



4

| | | |
|---|---|---|
| ಕಾಲಮುಂದ | ಅಂಶಿ | |
| ಚಂದ್ರನನ್ನು ತಲೆಯಲ್ಲಿ ಉಳ್ಳವನು | ಬಹುವ್ರೀಹಿ | ಕಮಲನಯನೆ |
| ಕಾಲಿನ + ಮುಂದು | ಅನಶಿ | |

(ಈ) ಕೆಳಬದಿ
ಎರಡು ಹಲ್ಲಿ
ಕೆಳದುಟಿ
ಮುಕ್ಕಣ್ಣ
ಶೇಷಶಾಯಿ
ಕಸಕಡ್ಡಿ
ಕಮಲನಯನೆ
ಗುಡುಗು ಮಿಂಚು ಸಿಡಿಲುಗಳು
ಕೈಕಾಲು